# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 607
2.. ಸದಸ್ಯರ ಹೆಸರು : ಶ್ರೀ ಕೆ. ಗೋವಿಂದರಾಜ್ (ವಿಧಾನ ಸಭೆಯಿಂದ ಚುನಾಯಿತರಾದವರು)
3. ಉತ್ತರಿಸುವ ದಿನಾಂಕ : 24-09-2020
4. ಉತ್ತರಿಸುವವರು : ಮುಖ್ಯಮಂತ್ರಿಗಳು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಬಿಬಿಎಂಪಿ ಮಹದೇವಪುರ ವಲಯದಲ್ಲಿ ಮುಖ್ಯ ಮಂತ್ರಿಯವರ ನವ ನಗರೋತ್ಥಾನ ಯೋಜನೆಯ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಟೆಂಡರ್ ಷರತ್ತಿನ ಪ್ರಕಾರ ಅರ್ಹತೆ ಹೊಂದಿಲ್ಲದವರಿಗೆ ಗುತ್ತಿಗೆ ನೀಡಲು ಸಿದ್ದತೆ ನಡೆದಿರುವ ಬಗ್ಗೆ ಸರ್ಕಾರಕ್ಕೆ ವಕೀಲರೊಬ್ಬರು ದೂರು ಸಲ್ಲಿಕೆಯಾಗಿರುವುದು ನಿಜವೇ; | ಹೌದು. |
| ಆ) | ಕಾಮಗಾರಿ ನಡೆಸುವವರು ಟೆಂಡರ್ ಷರತ್ತುಗಳ ಪ್ರಕಾರ ಮಹದೇವಪುರ 40ಕಿಮೀ ವ್ಯಾಪ್ತಿಯಲ್ಲಿ ಹಾಟ್‌ಮಿಕ್ಸ್ ಘಟಕ ಹೊಂದಿರುವುದು ಹಾಗೂ ವಾರ್ಷಿಕ ವಹಿವಾಟಿಗೆ ಸಂಬಂಧಿಸಿದಂತೆ ಈ ಗುತ್ತಿಗೆದಾರರು ತಪ್ಪು ಪ್ರಮಾಣ ಪತ್ರಗಳನ್ನು ಸಲ್ಲಿಸಿದ್ದಾರೆಂಬ ಕುರಿತು ಸರ್ಕಾರ ಕೂಲಂಕಷವಾಗಿ ತನಿಖೆ ನಡೆಸುವುದೇ? | ವಕೀಲರು ಸರ್ಕಾರಕ್ಕೆ ಸಲ್ಲಿಸಿರುವ ದೂರಿನ ಬಗ್ಗೆ ನಿಯಮಾನುಸಾರ ಪರಿಶೀಲಿಸಿ, ಟೆಂಡರ್ ಷರತ್ತುಗಳ ಪ್ರಕಾರ ಮಹದೇವಪುರ 40.0 ಕಿ.ಮೀ ವ್ಯಾಪ್ತಿಯಲ್ಲಿ ಹಾಟ್‌ಮಿಕ್ಸ್ ಘಟಕ ಹೊಂದಿರುವುದು ಹಾಗೂ ವಾರ್ಷಿಕ ವಹಿವಾಟಿಗೆ ಸಂಬಂಧಿಸಿದಂತೆ ಈ ಗುತ್ತಿಗೆದಾರರು ತಪ್ಪು ಪ್ರಮಾಣ ಪತ್ರಗಳನ್ನು ಸಲ್ಲಿಸಿರುವ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಬಿಬಿಎಂಪಿ ಆಯುಕ್ತರಿಗೆ ದಿನಾಂಕ 20-08-2020 ರಲ್ಲಿ ಪತ್ರ ಬರೆಯಲಾಗಿದೆ. ಅದರಂತೆ, ಪಾಲಿಕೆಯು ಈ ಬಗ್ಗೆ ಕೂಲಂಕಷವಾಗಿ ತನಿಖೆ ನಡೆಸಲು ಪಾಲಿಕೆಯ ತಾಂತ್ರಿಕ ಮತ್ತು ಜಾಗೃತ ಕೋಶ (ಟಿ.ವಿ.ಸಿ.ಸಿ) ಶಾಖೆಗೆ ವಹಿಸಲಾಗಿರುತ್ತದೆ. |

ಸಂಖ್ಯೆ: ನಅಇ 195 ಎಂಎನ್‌ವೈ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ